**<u>ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಉಡುಪಿ ಜಿಲ್ಲೆ, ಉಡುಪಿ</u>**

**<u>ಸ್ಪೆಷಲ್ ಕೇಸ್ ನಂಃ 14/2022</u>** <u>ಪಿ.ಡಬ್ಲ್ಯುಃ 2</u>

<u>ಸಿ.ಡಬ್ಲ್ಯುಃ 14</u>

| | |
|---|---|
| ಸಾಕ್ಷಿದಾರರ ಹೆಸರು | ಮರಿಗೌಡ ಎಂ.ಸಿ. |
| ತಂದೆಯ ಹೆಸರು | ಚಿಕ್ಕಹೊನ್ನಯ್ಯ |
| ವಯಸ್ಸು | 49 ವರ್ಷ |
| ಉದ್ಯೋಗ | ಹೆಚ್.ಸಿ. 10, ಕಾಪು ಪೊಲೀಸ್ ಠಾಣೆ |
| ವಿಳಾಸ | ಕಾಪು |

ದಿನಾಂಕಃ 09-06-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ</u>**

1) ನಾನು 2018 ರಿಂದ 2024 ರವರೆಗೆ ಉಡುಪಿ ನಗರ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೊಲೀಸ್ ಪೇದೆಯಾಗಿ ಸೇವೆ ಸಲ್ಲಿಸಿರುತ್ತೇನೆ.

2) ದಿನಾಂಕ 16-03-2021 ರಂದು ನಾನು ರಾತ್ರಿ ಠಾಣಾ ಪ್ರಭಾರದಲ್ಲಿದ್ದಾಗ ರಾತ್ರಿ 8.10 ಗಂಟೆಗೆ ಚಾ.ಸಾ-1 ಇವರು ನೀಡಿದ ವರದಿ , ಸ್ವತ್ತು ಮತ್ತು ಆರೋಪಿತರನ್ನು ಠಾಣೆಯಲ್ಲಿ ಸ್ವೀಕರಿಸಿ, ಅದಕ್ಕಾಗಿ ಠಾಣಾ ಗುನ್ನೆ ನಂಬ್ರ 46/2021 ಕ್ಕೆ ದಾಖಲಿಸಿಕೊಂಡು, ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೆ. ಆದಿನ ನಾನು ಸ್ವೀಕರಿಸಿದ ವರದಿಯನ್ನು ಈಗ ನೋಡಿ ಅದನ್ನು **ನಿಶಾನೆ ಪಿ-3** ಎಂದು ಅದರಲ್ಲಿರುವ ನನ್ನ ಹಿಂಬರಹ ಮತ್ತು ಸಹಿ **ನಿಶಾನೆ ಪಿ-3(ಎ)** ಎಂದು ಗುರುತಿಸಿದ್ದೇನೆ. ಪ್ರಥಮ ವರ್ತಮಾನವನ್ನು ಈಗ ನೋಡಿ ಅದನ್ನು ಈಗ **ನಿಶಾನೆ ಪಿ.4** ಎಂದು ಗುರುತಿಸಿದ್ದೇನೆ. ಅದರಲ್ಲಿರುವ ನನ್ನ ಸಹಿಯನ್ನು **ನಿಶಾನೆ ಪಿ-4(ಎ)** ಎಂದು ಗುರುತಿಸಿದ್ದೇನೆ. ಹಾಜರುಪಡಿಸಿದ ಮುದ್ದೆಮಾಲುಗಳಿಗೆ ಮು.ಮಾ ವರದಿ ಬರೆದಿದ್ದೆ. ಹಾಜರುಪಡಿಸಿದ ಆರೋಪಿತರ ಮೇಲೆ ದಸ್ತಗಿರಿ ಕ್ರಮ ಜರುಗಿಸಿದ್ದೆ. ಅದೇ ದಿನ ಸದರಿ ಗುನ್ನೆಯ ಮುಂದಿನ ತನಿಖೆಯನ್ನು ನನ್ನ

ಮೇಲಾಧಿಕಾರಿಗಳಿಗೆ ವಹಿಸಿದ್ದೆ. ಆದಿನ ಹಾಜರುಪಡಿಸಿದ ಆರೋಪಿತರನ್ನು ಈದಿನ ನ್ಯಾಯಾಲಯದಲ್ಲಿ ನೋಡಿ ಗುರುತಿಸಿದ್ದೇನೆ.

**ಪಾಟೀಸವಾಲುಃ 1 ನೇ ಆರೋಪಿತನ ಪರ ಶ್ರೀ ಟಿ.ವಿ.ಕೆ.ಎಸ್. ವಕೀಲರಿಂದ**

1) ನಾನು ದಸ್ತಗಿರಿಯ ಮಹಜರು ಬರೆದಿಲ್ಲ, ಅದರೆ ದಸ್ತಗಿರಿಯ ಮಾಹಿತಿಯನ್ನು ಆರೋಪಿತರ ತಂದೆಗೆ ನೀಡಿದ್ದೆ. ದಸ್ತಗಿರಿ ಕ್ರಮ ನಾನು ಜರುಗಿಸುವಾಗ ಸಾಕ್ಷಿದಾರರು ಇರಲಿಲ್ಲ. ನಿಪಿ-4 ರ ದಾಖಲೆಯನ್ನು ಮ್ಯಾಜಿಸ್ಟ್ರೇಟ್ ರವರಿಗೆ ಮುಟ್ಟಿಸಲು ಕೊಟ್ಟ ಸಮಯವನ್ನು ದಾಖಲಿಸಿದ್ದೇನೆ. ನಿಪಿ-3 ರ ಜೊತೆ ದಾಖಲಾತಿಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ-3, 4 ರ ದಾಖಲೆಗಳನ್ನು ಚಾಸಾ-13 ಇವರಿಗೆ ಕೊಟ್ಟಿದ್ದಕ್ಕಾಗಿ ದಾಖಲಾತಿ ಇದೆ. ನಾನು ನಿಪಿ-3(ಎ)ನೇದರಲ್ಲಿ ದಾಖಲಿಸಿದಂತೆ ನಿಪಿ-3 ರ ದೂರನ್ನು ನಾನು ಪಡೆದಿಲ್ಲ ಎಂದರೆ ಸರಿಯಲ್ಲ. ನಿಪಿ-3 ಮತ್ತು 4 ರ ದಾಖಲೆಗಳನ್ನು ನಿಪಿ-4 ರಲ್ಲಿ ದಾಖಲಿಸಿದ ಸಮಯಕ್ಕೆ ಚಾಸಾ-13 ಇವರ ಬಳಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಮ್ಮ ಠಾಣೆಯಿಂದ ನ್ಯಾಯಾಲಯದ ದೂರ 500 ಮೀಟರ್ ಗಳು.

**ಪಾಟೀಸವಾಲುಃ 2 ನೇ ಆರೋಪಿತನ ಪರವಾಗಿ ಶ್ರೀ ಪಿ.ಪಿ.ಜೆ. ವಕೀಲರು ಮೇಲಿನ ಪಾಟೀಸವಾಲನ್ನು ಅಳವಡಿಸಿಕೊಂಡಿದ್ದಾರೆ.**

**-ಮರುವಿಚಾರಣೆ - ಇಲ್ಲ -**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್.ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರು,
ಉಡುಪಿ.